Sri VEERENDRA PATIL.—I do not know the latest position. Anyway I think, Sir, he must be behind bars. I do not think that he has been released on bail also.

ಶ್ರೀ ಬೋಳ್ಳಾ ರಘುರಾಮ ಶೆಟ್ಟಿ.—ಈ ಮನುಷ್ಯನು ಮ್ಯಾಡ್ ಮ್ಯಾನ್ ಎಂದು ಗೊತ್ತಿದ್ದು 1968 ಮೇ 10ನೇ ತಾರಿಖಿಗೆ ಅನ್ವತ್ರೆಗೆ ಆಡ್ಮಿಟ್ ಮಾಡಿ, ಆಗಸ್ಟ್ 2, 1968ಕ್ಕೆ ರೀಲೀಸ್ ಮಾಡಿದ್ದಾರೆ. 1969, ಏಪ್ರಿಲ್ 15ರಂದು ಇವನು ಗೊಂಡು ಹಾರಿಸಿದ್ದಾನೆ. ಆದರೆ ಇವನಿಗೆ ಅನ್ವತ್ರೆಯಲ್ಲಿ ನರಿಯಾದ ಟ್ರೀಟ್‌ಮೆಂಟ್ ಆಗಿದೆಯೇ ಎಂಬುದನ್ನು ಎನ್‌ಕ್ವಾಯರಿ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅವನಿಗೆ ಟ್ರೀಟ್‌ಮೆಂಟ್ ಆಗಿದ್ದು ಮೆಂಟಲ್ ಆಸ್ಪತ್ರೆಯಲ್ಲಿ ಅದು 1968ರಲ್ಲಿ ಆದುದು. ಈ ಘಟನೆ ನಡೆದುದು 1969ರಲ್ಲಿ. ಅಲ್ಲಿ ಡ್ಯೂಟಿಗೆ ತೆಗೆದುಕೊಳ್ಳಬಹುದು ಎಂದು ಹೇಳಿದ ಪ್ರಕಾರ ಡ್ಯೂಟಿಗೆ ತೆಗೆದುಕೊಂಡಿದ್ದಾರೆ.

ಶ್ರೀ ಎ. ಎನ್. ಪಾಟೀಲ್.—ಈ ರೀತಿ ಆಸ್ಪತ್ರೆಯಿಂದ ಬಂದಂತಹ ಮನುಷ್ಯನಿಗೆ ಏನಾದರೂ ಟೇಬಲ್ ವರ್ಕ್ ಕೊಡುವುದರ ಬದಲು, ಈ ರೀತಿಯ ರೈಫಲ್ ಕೈಯಲ್ಲಿ ಕೊಡುವುದು ತಪ್ಪು. ಹಾಗೆ ಕೊಟ್ಟಂತಹವರಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

Sri VEERENDRA PATIL.—I do not know. I said he was treated in Mental Hospital in May 1968 and afterwards he was discharged and he secured a certificate saying that he is fit for duty and he was taken on duty.

Sri B. B. SAYANAK.—May I know whether the Doctor of Mental Hospital took some money from the Head Constable and therefore he got the fitness certificate ?

Sri VEERENDRA PATIL.—I do not know how to answer it.

Sri B. P. GANGADHAR.—Is it not wise on the part of the Government not to entrust fire arms to persons who have suffered from mental diseases and who have been admitted and discharged from the Mental Hospital, since at any time they may go wrong and catostrophies might be caused to public at large ?

Sri VEERENDRA PATIL.—I have already replied.

Gorur dam on the Hemavathi River

51. Sri N. A. CHANNE GOWDA (Pandavapura).—

Will the Chief Minister be pleased to state :—

(*a*) the total amount so far spent on Gorur Dam on the Hemavathi River ;

(*b*) the amount spent on staff, staff quarters and dam construction ;

(*c*) the number of Contractors whose tenders have been accepted and the value of work entrusted to them ;

(*d*) whether all the Contractors are executing the works as per schedule ;

(*e*) whether the Government has taken steps to obtain a technically sound seismographic report of the dam area in view of the repeated earthquakes, land tremors at Koyna ?

Sri VEERENDRA PATIL (Chief Minister).—

(*a*) Rs. 1,15,60,062 up to May 1969.

(*b*) Establishment: Rs. 14,95,712. Staff Quarters: Rs. 9,31,565 Dam Works: Rs. 47,50,748.

(*c*) (i) Tenders of three Contractors have been accepted.
(ii) Value of the work entrusted is Rs. 489·34 lakhs.

(*d*) No.

(*e*) The opinion of Experts is being obtained.

2-30 P.M.

ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಗೊರೂರು ಅಣೆಕಟ್ಟೆಯ ಬಗ್ಗೆ 1969ನೇ ಇಸವಿಯ ಮೇ ಮಾಹೆಯವರೆಗೆ 1,15,60,062 ರೂಪಾಯಿಗಳು ಖರ್ಚಾಗಿದೆ ಎಂದು ಕೊಟ್ಟಿದ್ದೀರಿ, ಆ ಕಣಿಕಟ್ಟಿಗೆ ಸಂಬಂಧಪಟ್ಟಹಾಗೆ ಈಗಾಗಲೇ 71 ಲಕ್ಷ ರೂಪಾಯಿಗಳ ಕೆಲಸ ಆಗಿದೆ. ಆದ್ದರಿಂದ ಆ ಸ್ಥಳದಲ್ಲಿ ಇನ್ನೂ ಉಳಿಕೆಯಾಗಿರುವ 43 ಲಕ್ಷ ರೂಪಾಯಿಗಳ ಕೆಲಸವನ್ನು ಕಂಪ್ಲೀಟ್ ಮಾಡುತ್ತೇವೆಂದು ಭರವಸೆಯನ್ನು ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ಅಣೆಕಟ್ಟಿನ ಕೆಲಸ ತ್ವರಿತವಾಗಿ ನಡೆಯುತ್ತಿದೆ. ಈಗ ಕೊಟ್ಟ ಹಣ ಸಾಕಾಗುವುದಿಲ್ಲ ಇನ್ನು ಹೆಚ್ಚಿನ ಹಣವನ್ನು ಅದಕ್ಕೆ ಒದಗಿಸಬೇಕಾಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ಆ ಅಣೆಕಟ್ಟಿನ ಕೆಲಸವನ್ನು 3 ಜನ ಕಂಟ್ರಾಕ್ಟರಿಗೆ ಒಪ್ಪಿಸಿದ್ದೇವೆಂದು ಹೇಳಿದ್ದೀರಿ, ಆ ಮೂರು ಜನ ಕಂಟ್ರಾಕ್ಟರುಗಳ ಹೆಸರು ಏನು, ಅವರಿಗೆ ಎಷ್ಟೆಷ್ಟು ಕೆಲಸವನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳುತ್ತೀರಾ ? ಒಪ್ಪಂದದಮೇರೆಗೆ ಎಲ್ಲ ಕಂಟ್ರಾಕ್ಟರುಗಳು ಕಾಮಗಾರಿಗಳನ್ನು ಕಾರ್ಯಗತಗೊಳಿಸುತ್ತಿರುವರೆ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ, ಹಾಗಾದರೆ ಅವರು ಏತಕ್ಕೋಸ್ಕರ ಕೆಲಸ ಮಾಡುತ್ತಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಆ ಕೆಲಸವನ್ನು 3 ಜನ ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದೇವೆ, ಅದರಲ್ಲಿ ಇಬ್ಬರು ಕೆಲಸ ಮಾಡುತ್ತಿಲ್ಲ. ಒಬ್ಬ ಕಂಟ್ರಾಕ್ಟರು ನಮಗೆ ರೇಟು ಸರಿಕೋಗುವುದಿಲ್ಲ. ಹೆಚ್ಚಿನ ರೇಟು ಕೊಡಬೇಕು ಎಂದು ತಕರಾರು ಹಾಕಿದ್ದಾರೆ. ಇನ್ನೊಬ್ಬರು ನಾವು ಅಲ್ಲಿ ಕೆಲಸ ಮಾಡುವುದಕ್ಕೆ ಹೋದಾಗ ನಮಗೆ ಬೇಕಾದಂತಹ ಭೂಮಿ ಸಿಕ್ಕಲಿಲ್ಲ. ರ್ಯಾಂಡ್ ಅಕ್ವಿಜಿಷನ್ ಆಗುವುದು ತಡವಾಯಿತು. ಆದ್ದರಿಂದ ನಾವು ಮೊದಲು ಒಪ್ಪಿಕೊಂಡ ದರಕ್ಕೆ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಒಬ್ಬ ಕಂಟ್ರಾಕ್ಟರು ಕೆಲಸ ಮಾಡುತ್ತಿದ್ದಾರೆ. ಆ ಕಂಟ್ರಾಕ್ಟರುಗಳ ಹೆಸರು ಹೇಳಬೇಕಾದ್ದರೆ ಅದಕ್ಕೆ ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ತೆಗೆದುಕೊಂಡು ನಾನು ಹೇಳುತ್ತಿದ್ದೇನೆ. (1) ಮೆನರ್ಸ್ ಎ. ಸಿ. ಕನ್ನ ಇವರಿಗೆ 104 ಲಕ್ಷ 73 ಸಾವಿರ ರೂಪಾಯಿಗಳ ಮೇನನರಿ ಡ್ಯಾಮ್ ಕೆಲಸವನ್ನು ಕೊಟ್ಟಿದೆ. (2) ಬಾಲಾಜಿ ಇಂಜಿನಿಯರಿಂಗ್ ಕನ್ಸ್ಟ್ರಕ್ಷನ್ ಕಂಪೆನಿಗೆ 2 ಕೋಟಿ 94 ಲಕ್ಷ 50 ಸಾವಿರ ರೂಪಾಯಿಗಳ ರೈಟ್ ಬ್ಯಾಂಕ್ ಅರ್ಥನ್ ಡ್ಯಾಮ್ ಕೆಲಸವನ್ನು ಕೊಟ್ಟಿದೆ. ಅಮೇಲೆ ಶ್ರೀಮಾನ್ ಮರಿಸ್ವಾಮಪ್ಪ ಎನ್ನುವವರಿಗೆ 90,15,000 ರೂಪಾಯಿಗಳ ಕೆಲಸವನ್ನು ಕೊಟ್ಟಿದೆ.

ಶ್ರೀ ಬಿ. ದೊಡ್ಡಜೋರೇಗೌಡ.—ಈ ಹೇಮಾವತಿ ಅಣೆಕಟ್ಟನ್ನು ಕಟ್ಟುವುದಕ್ಕೆ ಮಂಡಾ ಜಿಲ್ಲೆಯವರ ಪ್ರಬಲವಾದ ವಿರೋಧವಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ !

ಶ್ರೀ ವೀರೇಂದ್ರ ಪಾಟೀಲ್.—ಆ ವಿಚಾರ ನನಗೆ ಗೊತ್ತಿಲ್ಲ. ಈ ಅಣೆಕಟ್ಟನ್ನು ಕಟ್ಟುವುದರಿಂದ ಪಾಂಡವಪುರ, ಕೃಷ್ಣರಾಜಪೇಟೆ ಮುಂತಾದ ಪ್ರದೇಶಗಳಿಗೆ ಅನುಕೂಲವಾಗುತ್ತದೆ ಎಂದು ಕಾಣುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಹೇಮಾವತಿ ಜಲಾಶಯವನ್ನು ಕಟ್ಟುವುದಕ್ಕೆ ಮಂಡ್ಯಾ ಜಿಲ್ಲೆಯ ಕೃಷ್ಣರಾಜನಗರ ಅಣೆಕಟ್ಟಿನ ಕೆಳಗಡೆ ಇರತಕ್ಕ ಚುನಾಯಿತ ಪ್ರತಿನಿಧಿಗಳಿಂದಾಗಲಿ ಜನಗಳಿಂದಾಗಲೀ ತಕರಾರು ಆಗುತ್ತಿದೆ, ಕೃಷ್ಣರಾಜಸಾಗರದ ಕೆಳಗಡೆ ಇರತಕ್ಕ ಅಚ್ಚುಕಟ್ಟಿಗೆ ತೊಂದರೆಯಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ !

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಏನೂ ಅವರು ಹೇಳಿಲ್ಲ.

ಶ್ರೀ ಜಿ. ರಾಮೆಗೌಡ.—ಈ 3 ಜನ ಕಂಟ್ರಾಕ್ಟರುಗಳಲ್ಲಿ ಇಬ್ಬರು ಕಂಟ್ರಾಕ್ಟರುಗಳು ರೇಟು ಕಡಿಮೆ ಆಯಿತು, ಆದ್ದರಿಂದ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಹೇಳಿದರಿ. ಹಾಗಾದರೆ ಈ ವಿಚಾರವಾಗಿ ತಾವು ಏನಾದರೂ ತೀರ್ಮಾನ ತೆಗೆದುಕೊಂಡಿದ್ದೀರಾ, ಅಥವಾ ಈ ಕೆಲಸಕ್ಕೆ ರೀ ಟೆಂಡರ್ ಕರೆಯುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಪ್ರೊಸೀಜರ್ ಪ್ರಕಾರ, ರೂಲ್ಸ್ ಪ್ರಕಾರ ಅವರಿಗೆ ಕಂಟ್ರಾಕ್ಟ್ ಕೊಟ್ಟಿರುವಾಗ ಅವರು ರೂಲ್ಸ್ ಪ್ರಕಾರ ಕೆಲಸವನ್ನು ಮಾಡದಿದ್ದರೆ ಅವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು, ಮತ್ತೊಂದು ಏಜೆನ್ಸಿಗೆ ಆ ಕೆಲಸವನ್ನು ಒಪ್ಪಿಸಿ ಮಾಡಬೇಕು. ಅದನ್ನು ಇಂಜಿನಿಯರು ಮಾಡುತ್ತಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ಅಣೆಕಟ್ಟಿನ ಕೆಲಸಕ್ಕೆ ಸಂಬಂಧಪಟ್ಟಹಾಗೆ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿರುವ ಕತೆಯಲ್ಲ 47 ಲಕ್ಷ 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಇದೇ ರೇಟಿನಲ್ಲಿ ನೀವು ಈ ಅಣೆಕಟ್ಟಿನ ಕೆಲಸಕ್ಕೆ ದುಡ್ಡನ್ನು ಖರ್ಚು ಮಾಡಿದರೆ ಈ ಅಣೆಕಟ್ಟನ್ನು ಪೂರೈಸಬೇಕಾದರೆ ಎಷ್ಟು ವರ್ಷಗಳು ಬೇಕಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ರೆಕ್ಕದ ಪ್ರಕಾರ ಇನ್ನು ಎರಡು ವರ್ಷಗಳಲ್ಲಿ ರಿಜರ್ ವಾಯರ್‌ನಲ್ಲಿ ನೀರು ನಿಲ್ಲುತ್ತದೆಂದು ನಂಬಿಕೊಂಡಿದ್ದೇನೆ.

ಶ್ರೀ ಎಂ. ಬಸವರಾಜು.—ಗೊತ್ತೂರಿನ ಜನರು ಏನಾದರೂ ಈ ಅಣೆಕಟ್ಟೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದರೆ ಈ ಕೆಲಸವನ್ನು ನಿಲ್ಲಿಸುತ್ತೀರಾ ಅಥವಾ ಮುಂದುವರೆಸುತ್ತೀರಾ ?

† ಶ್ರೀ ವೀರೇಂದ್ರ ಪಾಟೀಲ್.—ವಿರೋಧ ಮಾಡುವ ಪ್ರಶ್ನೆಯೇ ಇಲ್ಲ. ಕೆಲಸ ಪ್ರಾರಂಭ ಮಾಡಿದ್ದೇವೆ. ಈಗ ಯಾರು ವಿರೋಧ ಮಾಡಿದರೂ ಕೂಡ ಕೆಲಸ ನಿಲ್ಲಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—(ಗು) ಪ್ರಶ್ನೆಗೆ ಉತ್ತರವಾಗಿ ತಜ್ಞರ ಅಭಿಪ್ರಾಯವನ್ನು ಪಡೆಯಲಾಗುತ್ತಿದೆ ಎಂದು ಹೇಳಿದ್ದೀರಿ. ತಜ್ಞರ ಅಭಿಪ್ರಾಯ ಪಡೆಯದೆ ಕೆಲಸ ಪ್ರಾರಂಭಮಾಡಿದ್ದೀರಿ. ಅವರೇನಾದರೂ ಈ ಪ್ರದೇಶ ಸರಿಯಿಲ್ಲ ಎಂದು ಹೇಳಿದರೆ ಇರುವರೆಗೆ ಖರ್ಚು ಮಾಡಿರುವ ಹಣ ವ್ಯರ್ಥವಾಗುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಕಟ್ಟಬಾರದು ಎಂದು ಯಾವ ತಜ್ಞರೂ ಅಭಿಪ್ರಾಯ ಪಡುವಹಾಗಿಲ್ಲ. ಕಟ್ಟುವ ಸ್ಪೇಷ್‌ನಲ್ಲಿ ಏನಾದರೂ ಭೂಕಂಪವಾಗುವಂತಹ ಪರಿಸ್ಥಿತಿ ಬಂದರೆ ಆಗ ಯಾವ ರೀತಿ ಸರಿಪಡಿಸಬೇಕು ಎಂಬ ಬಗ್ಗೆ ಸಲಹೆ ಕೊಡುತ್ತಾರೆ. ಅದರಂತೆ ಡಿಸೈನನ್ನು ಪರಿವರ್ತನೆ ಮಾಡಿ ಕಟ್ಟಬೇಕಾಗುತ್ತದೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಷೆಡ್ಯೂಲ್ ಪ್ರಕಾರ ಕೆಲಸ ನಡೆಯುತ್ತಿಲ್ಲ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಈ ಕಾರಣದಿಂದ ಈ ಕೆಲಸ ಇನ್ನು ಎಷ್ಟು ಸಮಯ ಹಿಂದೆ ಬೀಳಬಹುದು ಮತ್ತು ಅದರಿಂದ ನಮ್ಮ ರಾಜ್ಯಕ್ಕೆ ಎಷ್ಟು ನಷ್ಟವಾಗಬಹುದು ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಿಂದೆ ಬೀಳುವ ಪ್ರಶ್ನೆಯೇ ಇಲ್ಲ. ಡ್ಯಾಮ್ ಕೆಲಸ ಬಂದ್ ಆಗಿದೆ. ಆ ಕೆಲಸವನ್ನು ಬೇರೆ ಏಜೆನ್ಸಿಗೆ ಕೊಟ್ಟು ಕೆಲಸ ಮಾಡಿಸಬೇಕೆಂಬ ವಿಚಾರ ಇದೆ. ಇತರೇ ಕೆಲಸಗಳು ನಡೆಯುತ್ತಿವೆ.

Products of Mandya Distilleries

100. Sri C. K. RAJAIAH SHETTY (Chicknayakanahalli).—Will the Minister of Finance, Planning and Youth Welfare be pleased to state.—

(*a*) different products produced in Mandya Distilleries and quantity of product in each item since last 3 years from 1965-66, 1966-67 and 1967-68 ;

(*b*) The names of firms and persons holding quotas of these products and the rates at which they are sold and the quantities allotted to them.